ಎರಡು ಹೆಕ್ಟೇರ್ ಖುಷ್ಕಿ ಜಮೀನು ಅಥವಾ ತತ್ಸಮಾನ ತರಿ ಅಥವಾ ಬಾಗಯಾತ್ ಜಮೀನು ಉಳ್ಳವರು, ಸೆಲ್ ಫೋನ್, ಟೆಲಿಫೋನ್, ಪೆಟ್ರೋಲ್ ಮತ್ತು ಡೀಸೆಲ್ ನಿಂದ ಚಲಿಸುವ 2/4 ಚಕ್ರದ ವಾಹನಗಳನ್ನು ಹೊಂದಿರುವ ಕುಟುಂಬದವರು ಮತ್ತು 1 ಲಕ್ಷ ರೂ. ಗಳು ಮೀರಿ ಬ್ಯಾಂಕ್ ನಲ್ಲಿ ಸಾಲ ಪಡೆದ ಕುಟುಂಬಗಳು, ಚಾಲನೆಯಲ್ಲಿರುವ ಒಂದು ಬೋರ್ ವೆಲ್ ಹೊಂದಿರುವ ಕುಟುಂಬಗಳು, ತಿಂಗಳಿಗೆ ರೂ. 1000/– ವೇತನವನ್ನು ಸರ್ಕಾರಿ/ಸರ್ಕಾರೇತರ/ ಖಾಸಗಿ ಸಂಸ್ಥೆಗಳಿಂದ ಪಡೆಯುತ್ತಿರುವ ಕುಟುಂಬಗಳು, ಕಾಂಟ್ರಕ್ಟ್ ದಾರರಾಗಿ ನೋಂದಾವಣಿ ಮಾಡ ಲ್ಪಟ್ಟವರು, ಎ.ಪಿ.ಎಂ.ಸಿ Trader ಮತ್ತು Commission agents ಬೀಜ/ ಗೊಬ್ಬರಗಳ ಟ್ರೇಡರ್ಸ್/ಡೀಲರ್ಸ್ ಇತ್ಯಾದಿ ಆಗಿರುವವರ ಬಿಪಿಎಲ್ ಪಡಿತರ ಚೀಟಿ ಯನ್ನು ಅನರ್ಹರೆಂದು ಪರಿಗಣಿಸಲಾಗುವುದು.

ಮೇಲ್ಕಂಡ ಮಾನದಂಡಗಳನ್ನು ಅನುಸರಿಸಿ ಸಮೀಕ್ಷಾ ಸಂದರ್ಭದಲ್ಲಿ ಅರ್ಹರನ್ನು ಗುರುತಿಸಿ ಬಿಪಿಎಲ್/ಎಪಿಎಲ್ ಎಂದು ವರ್ಗೀಕರಣ ಮಾಡಲಾಗುತ್ತಿದೆ ಸದರಿ ಪಟ್ಟಿಯನ್ನು ಗ್ರಾಮಸಭೆಗಳಲ್ಲಿ ಮಂಡಿಸಿ ಅನುಮೋದನೆಯನ್ನು ಸಹ ಪಡೆಯಲಾಗುತ್ತಿದೆ.

ಶ್ರೀ ಎಸ್.ಎಲ್. ಧರ್ಮೇಗೌಡ: ಬಿಪಿಎಲ್ ಕಾರ್ಡ್ ಕೊಡುವ ವಿಚಾರದಲ್ಲಿ ಕೆಲವು ಕಡೆ ಬೋರ್ ವೆಲ್ ಕೊರೆದಿದ್ದು, ಆ ಬೋರ್ ವೆಲ್ ಫೇಲ್ ಆಗಿರುವುದಕ್ಕೂ ಕಾರ್ಡ್ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ದಯವಿಟ್ಟು, ಅದಕ್ಕೂ ಅವಕಾಶ ಮಾಡಿಕೊಡುವಂಥ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳುತ್ತೇನೆ.

ಉಪಾಧ್ಯಕ್ಷರು: ಶಕುಂತಲಾ ಶೆಟ್ಟಿಯವರೆ ಮಾತನಾಡಿ.ನೀವು ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಕುಮಾರಸ್ವಾಮಿ:... ಬಿಪಿಎಲ್ ಕಾಡ್ ್ ಕೊಡಬಾರದು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು:– ಆಯಿತು, ಕುಮಾರಸ್ವಾಮಿಯವರೆ ಅವರು ಹೇಳಿದ್ದಾರೆ. ಕುಳಿತುಕೊಳ್ಳಿ.

ಶ್ರೀಮತಿ ಶಕುಂತಲಾ ಶೆಟ್ಟಿ ಟಿ. (ಪುತ್ತೂರು):– ನಮ್ಮ ಪುತ್ತೂರಿನಲ್ಲಿ ಸಬ್–ಡಿವಿಜನ್ ಲೆವೆಲ್ ನಲ್ಲಿ ವಾರ್ತಾ ಭವನ ಕಾರ್ಯನಿರ್ವಹಿಸುತ್ತಿತ್ತು. ಅದು ಅಲ್ಲಿಂದ ಜಿಲ್ಲಾ ಕೇಂದ್ರಕ್ಕೆ ವರ್ಗಾವಣೆಯಾಗುತ್ತಿದೆ ಎಂದು ಗೊತ್ತಾದ ತಕ್ಷಣ ನಾನು ಮಾನ್ಯ ಸಚಿವರಲ್ಲೂ ಹಾಗೂ ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲೂ, ಅದನ್ನು ಅಲ್ಲಿ ಉಳಿಸಿಕೊಡಬೇಕೆಂದು ಕೇಳಿಕೊಂಡಿದ್ದೆ. ಅದು ಬೆಳ್ತಂಗಡಿ, ಪುತ್ತೂರು, ಸುಳ್ಯ, ಬಂಟ್ವಾಳ ತಾಲ್ಲೂಕುಗಳ ಕೇಂದ್ರವಾಗಿ ಕೆಲಸ ನಿರ್ವಹಣೆ ಮಾಡುತ್ತಿತ್ತು. ಮಾನ್ಯ

ಮುಖ್ಯಮಂತ್ರಿಯವರು ನನಗೆ ಪತ್ರ ಬರೆದಿದ್ದರು. ಅ ವರ್ಗಾವಣೆಯನ್ನು ರದ್ದುಪಡಿಸಲು ಆದೇಶಿಸಲಾಗಿದೆ ಎಂದು ಪತ್ರ ಸಮೇತ ಬಂದಿತ್ತು. ನಮ್ಮ ಸಚಿವರೂ ಭರವಸೆ ಕೊಟ್ಟಿದ್ದರು. ಆದರೆ, ಕ್ಯಾಬಿನೆಟ್ ನಲ್ಲಿ ಅದು ತೀರ್ಮಾನವಾದ ಕಾರಣ ಇಡೀ ರಾಜ್ಯಕ್ಕೆ ಒಂದೇ ರೀತಿಯ ಕಾನೂನು ಎಂದು ಹೇಳಿ ಅದನ್ನು ವರ್ಗಾವಣೆ ಮಾಡುವಂಥ ಆದೇಶ ಬಂತು, ಆದರೆ, ನಾನು ಕೇಳುತ್ತಿರುವುದು, ನಮ್ಮ ಇಡೀ ರಾಜ್ಯದಲ್ಲಿ ಮೂರು ಕಡೆ ಮಾತ್ರ ವಾರ್ತಾ ಇಲಾಖೆಗೆ ಸ್ವಂತ ಕಟ್ಟಡಗಳು ಇವೆ ಎಂದು ತಿಳಿದು ಬಂದಿದೆ. ಅದನ್ನು ಉಳಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಹಾಗೂ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಏಕೆಂದರೆ, ನಮ್ಮ ಪುತ್ತೂರಿನಲ್ಲಿ ಎಲ್ಲ ಪತ್ರಿಕಾ ಮಾಧ್ಯಮದವರಿಗೆ ಅದೊಂದು ಅನುಕೂಲವಾಗುತ್ತಿತ್ತು. ಧರ್ಮಸ್ಥಳ, ಸುಬ್ರಹ್ಮಣ್ಯ ಹಾಗೂ ಪ್ರವಾಸೋದ್ಯಮದ ಕೇಂದ್ರಗಳಾಗಿರುವ ಕಾರಣ ಇಡೀ ರಾಜ್ಯದಲ್ಲಿ ಬೆಂದರು ತೀರ್ಥ ಅಂತ ಹೇಳಿ ಬಿಸಿನೀರಿನ ಬುಗ್ಗೆ ಇರುವಂಥ ಒಂದು ತಾಲ್ಲೂಕು ನಮ್ಮದಾಗಿರುವ ಕಾರಣ ಸ್ವಂತ ಕಟ್ಟಡವಿರುವ ಕಾರಣ, ಆ ಕೇಂದ್ರವನ್ನು ಅಲ್ಲಿ ಉಳಿಸಿಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇಡೀ ರಾಜ್ಯದಲ್ಲಿ ಈ ರೀತಿಯ ಉಪ ಕೇಂದ್ರಗಳು ಎಲ್ಲೆಲ್ಲಿ ಇವೆಯೋ, ನಾನು ನಿನ್ನೆಯಷ್ಟೆ ಮಾನ್ಯ ಸಚಿವರನ್ನು ಭೇಟಿ ಮಾಡಿ ಒಂದು ವಿನಂತಿ ಮಾಡಿಕೊಂಡರೆ ಅಂದರೆ ಈ ರೀತಿಯ ಉಪ ಕೇಂದ್ರಗಳು ವಾರ್ತಾ ಇಲಾಖೆಯಲ್ಲಿ ಎಲ್ಲೆಲ್ಲಿ ಇವೆಯೋ ಎಲ್ಲ ಕಡೆ ಮುಚ್ಚುವುದಕ್ಕೆ ರಾಜ್ಯ ಸರ್ಕಾರ ನಿರ್ಧರಿಸಿದೆ. ಇದರಿಂದ ಏನಾಗುತ್ತದೆ. ಉಪ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವಂಥವರು ಅಲ್ಲಿ ಅದು ಬಂದ್ ಆಗಿರುವುದರಿಂದ ನಮ್ಮ ಪತ್ರಿಕಾ ಕ್ಷೇತ್ರದ ವರದಿಗಾರರಿಗೆ ಕೆಲವು ಮಟ್ಟಿನ ಸಹಕಾರ ಮಾಡುತ್ತಿದ್ದರು. ನಿರೀಕ್ಷೆಯಂಥ ಒಂದು ಅನುಕೂಲವಾಗುತ್ತಿರಲಿಲ್ಲವೆನ್ನುವುದು ನಮ್ಮೆಲ್ಲರ ಅನುಭವದಲ್ಲಿದ್ದರೂ ಅದನ್ನು ಹೆಚ್ಚು ಅನುಕೂಲಕರವಾದ ರೀತಿಯಲ್ಲಿ ಮಾಡುವಂಥ ಪ್ರಯತ್ನವಾಗಬೇಕಾಗಿತ್ತು. ಮುಚ್ಚುವುದರ ಹಿನ್ನೆಲೆಯಲ್ಲಿರುವಂಥ ರ್‍ಯಾಷನಾಲಿಟಿ ಏನು ಅನ್ನುವುದನ್ನು ಈ ಸದನಕ್ಕೆ ತಿಳಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಬಿ. ಶಿವರಾಂ (ವಾರ್ತಾ ಮತ್ತು ಪ್ರಚಾರ ಸಚಿವರು): ನಾನು ಸದಸ್ಯರ ಜೊತೆ ಈಗಾಗಲೇ ಚರ್ಚಿಸಿದ್ದೇನೆ. ಹೌದು ರಾಜ್ಯದಲ್ಲಿ ಎಲ್ಲೆಲ್ಲಿ ಸಬ್–ಡಿವಿಜನ್ ಗಳು ಇವೆಯೋ, ಅದನ್ನು ಒಂದು ಪಾಲಿಸಿ ಆಧಾರದ ಮೇಲೆ ಸಿಬ್ಬಂದಿ ಇತ್ಯಾದಿ ಕೊರತೆ ಎನ್ನುವುದರ ಜೊತೆಗೆ ಅ ನಿರೀಕ್ಷಣಾ ಪ್ರಮಾಣದಂಥ ಕೆಲಸ ಅಲ್ಲಿ ಇಲ್ಲ ಅನ್ನತಕ್ಕಂಥ ಅವಲೋಕನದ ವರದಿ ಮೇಲೆ ಇವತ್ತು ಅ ತೀರ್ಮಾನವನ್ನು ಕೈಗೊಂಡು ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಸಬ್ ಡಿವಿಜನ್‌ಗಳು ಇವೆಯೋ, ಅದನ್ನು ಮುಚ್ಚುವುದರ

ಮೂಲಕ ಆ ಎಲ್ಲ ಸಿಬ್ಬಂದಿಗಳು ಮತ್ತು ಅಲ್ಲಿ ಇದ್ದ ಇತರೆ ವಾಹನ ಮತ್ತೊಂದನ್ನು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಕೊಟ್ಟು ಆ ಕಛೇರಿಯನ್ನು ಎಲ್ಲ ರೀತಿಯ ವ್ಯವಸ್ಥೆಯನ್ನು ಕೊಡುವ ವ್ಯವಸ್ಥೆ ನಿರ್ಮಾಣ ಮಾಡಿದ್ದೇವೆ. ವಾಹನಗಳಿಲ್ಲದೆ ಕೊರತೆ ಇದೆ, ಸಿಬ್ಬಂದಿಗಳಿಲ್ಲದೆ ಕೊರತೆ ಇದೆ. ಅವರು ಹೇಳಿದಹಾಗೆ, ಇಡೀ ಜಿಲ್ಲೆಯಲ್ಲಿ ಮೂರು ಮಾತ್ರ ಸಬ್–ಡಿವಿಜನ್ ಕಟ್ಟಡಗಳಿವೆ. ಅದು ಬಿಟ್ಟರೆ, ಬೇರೆ ಕಡೆ ಇಲ್ಲ. ಈಗಾಗಲೇ ಅದರ ಬಗ್ಗೆ ತಮ್ಮ ಜೊತೆ ಎಲ್ಲ ಚರ್ಚೆ ಮಾಡಿದ್ದೇನೆ. ಸದುದ್ದೇಶದಿಂದ ಈ ಕಾರ್ಯಕ್ರಮ ಮಾಡಿಕೊಂಡಿದ್ದೇವೆ. ಹೊರತು ಇದರಲ್ಲಿ ಮುಚ್ಚಬೇಕೆಂದು ದುರುದ್ದೇಶ ಏನೂ ಇಲ್ಲ. ಜಿಲ್ಲಾ ಕೇಂದ್ರಗಳನ್ನು ಸುಸಜ್ಜಿತವಾಗಿ ಎಲ್ಲ ವ್ಯವಸ್ಥೆ ನಿರ್ಮಾಣ ಮಾಡಿ ಅಲ್ಲಿಯೂ ಕೂಡ ಈಗಾಗಲೇ ಸಿಬ್ಬಂದಿ ಇಲ್ಲ, ವಾಹನಗಳೂ ಇಲ್ಲ, ಕೆಲವು ಕಡೆ ಟಿಎ:ಡಿಎ ಕೊಟ್ಟಿಲ್ಲ ಎನ್ನುವುದನ್ನೂ ಸಾಕಷ್ಟು ಮಂತ್ರಿಗಳೂ ಕೂಡ ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡುವುದರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಹೊರತು ಅಲ್ಲಿ, ಇಲ್ಲಿ ಎನ್ನುವ ಯಾವುದೇ ತಾರತಮ್ಯದ ಮೇಲೆ ನಾವು ಮುಚ್ಚುವ ಕೆಲಸ ಮಾಡಿಲ್ಲ. ತಮ್ಮ ಗಮನಕ್ಕೂ ತಂದಿದ್ದೇವೆ. ತಾವು ಹೇಳಿದ ಹಾಗೂ ಮಾಡಿದ್ದೇವೆ. ಅವರ ಜೊತೆಯಲ್ಲಿ ಕೂಡ ಮಾತನಾಡಿದ್ದೇವೆ. ಸಚಿವರು ಕೆಲವರು ಹೇಳಿದರು. ಅವರ ಗಮನಕ್ಕೂ ತಂದೆ, ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಮಲ್ಲಿಕಾರ್ಜುನ ಖರ್ಗೆ ಅವರ ಜಿಲ್ಲೆಗೆ ಹೋಗಿದೆ ಎಂದರೆ ಯಾವ ಕಾರಣಕ್ಕಾಗಿದೆ ಎಂದು ಅವರಿಗೂ ಕನ್‌ವಿನ್ಸ್ ಮಾಡಿದ್ದೇವೆ. ದಯಮಾಡಿ, ತಾವು ಸಹಕರಿಸುತ್ತೀರಾ ಎಂದು ನಾನು ಭಾವಿಸುತ್ತೇನೆ.

ವಿಷಯ:– ರಾಜ್ಯದ ಪ್ರಮುಖ ನಗರಗಳಲ್ಲಿ ಭಿಕ್ಷಾಟನೆ ಅಧಿಕಗೊಂಡಿದ್ದು ಅದನ್ನು ನಿಂತ್ರಿಸುವಲ್ಲಿ ಸರ್ಕಾರ ವಿಫಲವಾಗಿರುವುದರ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ರಸ್ತೆಗಳಲ್ಲಿ ಭಿಕ್ಷುಕರ ಕಾಟ ಬಹಳ ಜಾಸ್ತಿಯಾಗಿಬಿಟ್ಟು, ಓಡಾಡುವುದು ತೊಂದರೆಯಾಗಿದೆ. ಬೆಂಗಳೂರಿನಲ್ಲಂತು ನೀವೆಲ್ಲಾದರೂ ನಿಲ್ಲಿಸಿ, ಯಾವ ಟ್ರಾಫಿಕ್ ಆದರೂ ನಿಲ್ಲಿ ಯಾರಾದರೊಬ್ಬರು ಬರುವುದು ಭಿಕ್ಷೆಗೆ ನಿಲ್ಲುವುದು, ಕಾರ್‌ಗಳಲ್ಲಿ ಏನಾದರೂ ಓಡಾಡಬೇಕೆಂದರೆ, ಭಾರೀ ಅಗಾಧವಾದ ಟ್ರಾಫಿಕ್ ನಲ್ಲಿ ಅವರದೊಂದು ಮಧ್ಯೆ ಅಡ್ಡ ಬರುವುದು, ಬೆಳಿಗ್ಗೆ ಕಬ್ಬನ್ ಪಾರ್ಕ್‌ನಲ್ಲಿ ವಾಕ್ ಹೋದರೂ ಭಿಕ್ಷುಕರು ಬರುವುದಕ್ಕೆ ಶುರು ಮಾಡಿದ್ದಾರೆ. ಅಲ್ಲಿ ಕೂಡ ಗಾಡಿ ತಳ್ಳಿಕೊಂಡು ಬಂದು ಏನಾದರೂ ಕೊಡಿ ಎಂದು ಹೇಳಿ ಬರುತ್ತಾರೆ. ಕಾನೂನು ಪ್ರಕಾರ ಪೊಲೀಸ್ ನವರು ಅವರನ್ನು ತೆಗೆದುಕೊಂಡು ಹೋಗಿ ಎಲ್ಲಾದರೂ ಒಂದು ಕಡೆ ರಿಹ್ಯಾಬಿಲೇಟೇಷನ್ ಸೆಂಟರ್‌ಗೆ ಕೂರಿಸಿ, ಅವರಿಗೇನಾದರೂ ಪುನರ್ ವಸತಿ ಮಾಡಬೇಕಾದುದು ಇದ್ದರೂ ಕೂಡ ಬೆಂಗಳೂರಿನಲ್ಲಿ ಪೋಲೀಸ್ ನವರಿಗೆ ಕಣ್ಣಿಲ್ಲವೇ? ಅಥವಾ ನಮಗೇ ಕಣ್ಣಿದೆಯೇ? ಎನ್ನುವ ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇದನ್ನು ಎಲ್ಲಾದರೂ